ಮಡಿಕೇರಿಯ ಸುತ್ತಮುತ್ತ ಹತ್ತಾರು ಪ್ರವಾಸಿ ತಾಣಗಳಿವೆ. ಅವುಗಳಲ್ಲಿ ಬೈಲುಕುಪ್ಪೆಯ ಗೋಲ್ಡನ್ ಟೆಂಪಲ್ ಎಲ್ಲಕ್ಕಿಂತ ಮನಮೋಹಕ.

ಚಿತ್ರ–ಬರಹ:
**ಕೃಷ್ಣ ಪ್ರಶಾಂತ್ ವಿ. ಗೇರುಕಟ್ಟೆ**

ಮಡಿಕೇರಿ ನಾಡಿನ ಪ್ರಮುಖ ಪ್ರವಾಸಿತಾಣಗಳಲ್ಲೊಂದು. ಇಲ್ಲಿನ ಬೈಲುಕುಪ್ಪೆಯ ಗೋಲ್ಡನ್ ಟೆಂಪಲ್ (ಸುವರ್ಣ ದೇಗುಲ) ಪ್ರವಾಸಿಗರ ನೆಚ್ಚಿನ ತಾಣ. ಕುಶಾಲನಗರದಿಂದ ಸುಮಾರು 6 ಕಿ.ಮೀ ದೂರದಲ್ಲಿದೆ. ಇದು ಟಿಬೆಟಿಯನ್ನರ ಆಶ್ರಯತಾಣ. ಬೌದ್ಧರ ಶ್ರದ್ಧಾಕೇಂದ್ರ. ಬೌದ್ಧ ಗುರು ದಲೈಲಾಮ ಇಲ್ಲಿಗೆ ಭೇಟಿ ಕೊಡುತ್ತಾರೆ. ತನ್ನ ಪ್ರಶಾಂತ ವಾತಾವರಣ ಹಾಗೂ ಕಣ್ಮನ ಸೆಳೆಯುವ ಪ್ರಕೃತಿ ಸೌಂದರ್ಯದಿಂದಾಗಿ ಇದು ಈ ಭಾಗದಲ್ಲೇ ಹೆಸರುವಾಸಿ.

‘ಮಿನಿಟಿಬೆಟ್’ ಎಂದೇ ಕರೆಯಲ್ಪಡುವ ಈ ಪ್ರದೇಶದಲ್ಲಿ ಸುಮಾರು 1961ರ ಆಸುಪಾಸಿನಲ್ಲಿ ಈ ಚೆನ್ನದ ದೇಗುಲ ಸ್ಥಾಪನೆಗೊಂಡಿತು. ವಿಶ್ವದಲ್ಲೇ ಟಿಬೆಟಿಯನ್ನರ ಎರಡನೇ ಅತಿ ದೊಡ್ಡ ವಾಸಸ್ಥಾನವಿದು. ಈ ಪ್ರದೇಶದಲ್ಲಿ ಪ್ರಸ್ತುತ ಸುಮಾರು 70,000ಕ್ಕೂ ಅಧಿಕ ಬೌದ್ಧ ಸನ್ಯಾಸಿಗಳು ಹಾಗೂ ಮಕ್ಕಳು ವಾಸಿಸುತ್ತಿದ್ದಾರೆ. ಕಳೆದ ಶತಮಾನದ 60ರ ದಶಕದಲ್ಲಿ ಚೀನಾದ ದಾಳಿಯಿಂದ ನಿರಾಶ್ರಿತರಾದ ಅನೇಕ ಟಿಬೆಟಿಯನ್ನರು ಇಲ್ಲಿಗೆ ಬಂದು ನೆಲೆಸಿದ್ದರು. ನಂತರ ಈ ಪ್ರದೇಶವನ್ನು




# ಬೈಲುಕುಪ್ಪೆಯ ಸುವರ್ಣ ದೇಗುಲ